ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.42/2023

| | | | |
|---|---|---|---|
| ಹೆಸರು | : | ಶಿವಣ್ಣ | ಪಿ.ಡಬ್ಲ್ಯು :1 |
| ತಂದೆ ಹೆಸರು | : | ಲೇ. ಚಿಕ್ಕಸೋಮಣ್ಣ | ಸಿ.ಡಬ್ಲ್ಯು :1 |
| ವಯಸ್ಸು | : | 65 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ನಿಟ್ಟೂರು | |

ಸಾಕ್ಷಿಯನ್ನು ದಿಃ 08.01.2024 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಈಗ ಮೂರು ನಾಲ್ಕು ತಿಂಗಳ ಹಿಂದೆ 3 ನೇ ತಾರೀಖು ನನ್ನ ಜಮೀನಿನ ಒಳಗೆ ನೀರು ಆಯಿಸುತ್ತಿದ್ದೆ. ಆರೋಪಿತರು ನಾಲ್ಕು ಜನ ಕರೆಸಿದ್ದಯ್ಯ, ಮಂಜುನಾಥ, ರಮೇಶ, ಸಿದ್ದರಾಜು ನಮ್ಮ ಜಮೀನಿನ ಒಳಗೆ ಟ್ರಾಕ್ಟರ್ ತೆಗೆದುಕೊಂಡು ಬಂದರು. ಈ ರೀತಿ ಅವರು ಈಗಾಗಲೇ 3-4 ಸಾರಿ ಮಾಡಿದ್ದರು. ನಾನು ಏಕೆ ಹೀಗೆ ಮಾಡುತ್ತೀರಿ ಎಂದು ಕೇಳಿದೆ. ಆರೋಪಿ ಮಂಜಣ್ಣ ದೊಣ್ಣೆ ತೆಗೆದುಕೊಂಡು ನನ್ನ ತಲೆಗೆ ಮೈ ಕೈಗೆ ಹೊಡೆದ. ಉಳಿದ ಆರೋಪಿತರು ಸಹ ಕೈಯಿಂದ ನನ್ನ ಮೈ ಕೈಗೆ ಮುಖಕ್ಕೆ ಹೊಡೆದರು. ನಾನು ಓಡಿ ಹೋಗಲು ಪ್ರಯತ್ನ ಪಟ್ಟೆ, ಅವರು ಓಡಿ ಬಂದು ನನ್ನನ್ನು ಹಿಡಿದುಕೊಂಡು. ಆರೋಪಿತರು ಹಗ್ಗದಿಂದ ಇವನನ್ನು ಕಲ್ಲು ಕಟ್ಟಿ ಬಾವಿಗೆ ಹಾಕಿ, ಎಷ್ಟು ಲಕ್ಷ ಬೇಕಾದರೂ ಖರ್ಚಾಗಲೀ ಎಂದು ಹೇಳುತ್ತಿದ್ದರು. ಅಷ್ಟರಲ್ಲಿ ನನ್ನ ಭಾಮೈದ ರಂಗನಾಥ, ನನ್ನಮಗ ಶಶಾಂಕ್ ಮತ್ತು ಹನುಮಂತರಾಜು ಬಂದು ನನ್ನನ್ನು ಬಿಡಿಸಿಕೊಂಡರು. ನನ್ನನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ರಕ್ತ ಸುರಿಯುತ್ತಿತ್ತು. ಗುಬ್ಬಿ ಪೊಲೀಸ್ ಠಾಣೆಗೆ 4 ನೇ ತಾರೀಖು ಹೋಗಿ ದೂರು ಕೊಟ್ಟೆನು.

ದೂರಿನಲ್ಲಿ ಸಾಕ್ಷಿ ತಮ್ಮ ಸಹಿ ಗುರುತಿಸುತ್ತಾರೆ. ಅದನ್ನು ನಿಪಿ - 1 ಎಂದು, ಸಾಕ್ಷಿ ಸಹಿಯನ್ನು ನಿಪಿ - 1 (ಎ) ಎಂದು ಗುರುತಿಸಲಾಯಿತು. 5 ನೇ ತಾರೀಖು ಪೊಲೀಸರು ಸ್ಥಳಕ್ಕೆ ಬಂದರು, ಸ್ಥಳ ನಾನು ತೋರಿಸಿದಂತೆ ಚಾಸಾ- 5 ಮತ್ತು ಇನ್ನೊಬ್ಬರು ಇದ್ದರು. ಮಹಜರ್ ಅನ್ನು ನಿಪಿ - 2 ಎಂದು, ಸಾಕ್ಷಿ ಸಹಿಯನ್ನು ನಿಪಿ - 2 (ಎ) ಎಂದು ಗುರುತಿಸಲಾಯಿತು. ನಾನು ಈ ಸಂಬಂಧ ಮುಂದುವರೆದ ಹೇಳಿಕೆಯನ್ನು ಕೊಟ್ಟಿದ್ದೇನೆ. ಪೊಲೀಸರು ಸ್ಥಳದಿಂದ ಏನನ್ನು ವಶಪಡಿಸಿಕೊಂಡಿಲ್ಲ. ನನಗೆ ಹಲ್ಲೆ ಮಾಡಿ ಆರೋಪಿತರನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇವರು ದೊಣ್ಣೆಯಿಂದ ಆರೋಪಿತರು ನನಗೆ ಹೊಡೆದಿದ್ದಾರೆ ಎಂದರೆ ಸರಿ. ಅದನ್ನು ಮೂ ಮಾ - 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು)

ಪಾಟೀಸವಾಲುಃ ಸ ಸ ಅ ರವರಿಂದಃ-

ದಿಃ03.12.2022 ರಂದು ಘಟನೆ ಆಗಿದೆ ಎಂದರೆ ಸರಿ. ಆಗ ಬೆಳಿಗ್ಗೆ 8.45 ಆಗಿತ್ತು ಎಂದರೆ ಸರಿ. ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಪ್ರಕಾಶ್ ಮತ್ತು ಬಸವರಾಜು ರವರ ಮಗ ಶಶಾಂಕ್ ಇದ್ದರು ಎಂದರೆ ಶಶಾಂಕ್ ಇರಲಿಲ್ಲ, ರಘು ಇದ್ದರು ಎಂದು ಹೇಳುತ್ತಾರೆ. ಮಹಜರ್ ಬೆಳಿಗ್ಗೆ 8.30 ರಿಂದ 9.30 ಆಗಿತ್ತು ಎಂದರೆ ಸರಿ. ಮಹಜರ್ ಸಮಯ ಪೊಲೀಸರು ಒಂದು ದೊಣ್ಣೆಯನ್ನು ಸ್ಥಳದಿಂದ ವಶಪಡಿಸಿಕೊಂಡು ಬಂದರು ಎಂದರೆ ಸರಿ. ನನ್ನನ್ನು ಆರೋಪಿತರು ಹೊಡೆಯುವಾಗ ಚಾಸಾ- 2 ಮತ್ತು 3 ಬಿಡಿಸಿದರು, ಆನಂತರ ನಾನು ನನ್ನ ಮಗನಿಗೆ ಫೋನ್ ಮಾಡಿ ಕರೆಸಿಕೊಂಡೆ ಎಂದರೆ ಸರಿ. ನಾನು ನನ್ನ ಮಗನ ಜೊತೆಗೆ ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಪಡೆದು ಮರುದಿವಸ 4 ನೇ ತಾರೀಖು ಪೊಲೀಸ್ ಠಾಣೆಗೆ

ಹೋಗಿ ದೂರು ಕೊಟ್ಟಿದ್ದೇನೆ ಎಂದರೆ ಸರಿ.

ಪಾಟೀಸವಾಲು: ಆರೋಪಿ ಪರ ಕೆ.ಆರ್.ಪಿ. ವಕೀಲರಿಂದಃ-

ಚಾಸಾ- 2 ನನ್ನ ಭಾಮ್ಮೈದ ಎಂದರೆ ಸರಿ. ಚಾಸಾ- 3 ರವರಿಗೆ ನನ್ನ ತಂಗಿಯನ್ನು ಮದುವ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಚಾಸಾ- 2 ಕೊರಟಗೆರೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಚಾಸಾ- 3 ತುಮಕೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. ಚಾಸಾ- 4 ಶಶಾಂಕ್ ನನ್ನ ಮಗ. ಚಾಸಾ- 5 ಸಹ ನನ್ನ ಬಾಮ್ಮೈದ ಅವನು ಕೊರಟಗೆರೆಯಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ.14. ಆ ಜಮೀನು ನನ್ನ ಹೆಸರಿನಲ್ಲಿದೆ ಎಂದುಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ ತೋರಿಸಲು ಪಹಣಿ ಹಾಜರು ಪಡಿಸಿದ್ದೇನೆ. ನನ್ನ ಜಮೀನು ಆ ಜಾಗದಲ್ಲಿ ಇಲ್ಲ, ನಾನು ರುದ್ರಾಣಮ್ಮ ಎನ್ನುವರ RTC ಹಾಜರು ಪಡಿಸಿದ್ದೇನೆ ಎಂದರೆ ಸರಿ. ಆರೋಪಿತರು ಬೇರೆಯವರ ಜಮೀನಿನಲ್ಲಿ ಹೋಗುವಾಗ ನಾನು ಅವರಿಗೆ ಬೈದೆ ಎಂದರೆ ಸರಿಯಲ್ಲ. ಆರೋಪಿತರು ಗಲಾಟೆ ಆಗಿದೆ ಎಂದು ಹೇಳುವ ದಿನ ಅವರು ಆ ಸ್ಥಳದಲ್ಲಿ ಇರಲಿ ತೋರಿಸಲು ಪಹಣಿ ಹಾಜರು ಪಡಿಸಿದ್ದೇನೆ. ನನ್ನ ಜಮೀನು ಆ ಜಾಗದಲ್ಲಿ ಇಲ್ಲ, ನಾನು ರುದ್ರಾಣಮ್ಮ ಎನ್ನುವರ RTC ಹಾಜರು ಪಡಿಸಿದ್ದೇನೆ ಎಂದರೆ ಸರಿ. ಆರೋಪಿತರು ಬೇರೆಯವರ ಜಮೀನಿನಲ್ಲಿ ಹೋಗುವಾಗ ನಾನು ಅವರಿಗೆ ಬೈದೆ ಎಂದರೆ ಸರಿಯಲ್ಲ. ಆರೋಪಿತರು ಗಲಾಟೆ ಆಗಿದೆ ಎಂದು ಹೇಳುವ ದಿನ ಅವರು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತರ ಜಮೀನಿನ ಮೇಲೆ ಹಾದು ಹೋಗುವುದಿಲ್ಲ. ಆರೋಪಿತರು ಯಲ್ಲಯ್ಯ ಎನ್ನುವವರ ಜಮೀನಿನಲ್ಲಿ ಅಡಿಕೆ ಚೇಣಿ ಮಾಡುತ್ತಿರುವಾಗ ನಾನೇ ಅವರನ್ನು ನೋಡಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಪೂರ್ವ ದಿಕ್ಕಿನಿಂದ ಅತಿಕ್ರಮ ಪ್ರವೇಶ ಮಾಡಿದ್ದಾರೆ, ಅದನ್ನು ನಾನು ದೂರಿನಲ್ಲಿ ಬರೆಸಿಲ್ಲ. ಕರೆಸಿದ್ದಯ್ಯ ನವರು ಓಡಾಡಲು ಜಾಗ ಬಿಟ್ಟಿದ್ದು, ಆಗ ಆರೋಪಿತರು ಜಮೀನಿನ ಕೆಲಸಕ

ಹೋಗುತ್ತಿರುವಾಗ ನಾನು ಅವರಿಗೆ ಅವಾಚ್ಯ ಶಬ್ದಳಿಂದ ಬೈದಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರು ತಂದ ಟ್ರ್ಯಾಕ್ಟರ್ ನಂಬರ್, ಕಲರ್, ಕಂಪನಿ ಗೊತ್ತಿಲ್ಲ. ಆರೋಪಿತರು ನನಗೆ ಹಗ್ಗ ಕಟ್ಟಿ ಕಲ್ಲು ಕಟ್ಟಿ ಬಾವಿಗೆ ಎಸೆಯಿರಿ, ಎಷ್ಟು ಲಕ್ಷ ಬೇಕಾದರೂ ಖರ್ಚಾಗಲೀ ಎಂದು ಹೇಳಿದ್ದಾರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಯಾವುದೇ ಗಲಾಟೆ ಆಗಿಲ್ಲ, ನನ್ನನ್ನು ಯಾರು ಬಂದು ಬಿಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ರಕ್ತವಾಗಿದ್ದ ಬಟ್ಟೆಗಳನ್ನು ನಾನು ಪೊಲೀಸರಿಗೆ ಕೊಟ್ಟಿದ್ದೇನೆ. ಗಲಾಟೆ ಆದಾಗ ನನ್ನ ಮಗ ಇರಲಿಲ್ಲ ಎಂದರೆ ಸರಿ. ನಿಟ್ಟೂರಿನಲ್ಲಿಯೂ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ದೂರನ್ನು ನನ್ನ ಮಗನ ಕೈಯಲ್ಲಿ ಬರೆಸಿದ್ದೇನೆ. ಅದನ್ನು ನಾನು ಓದಿ ತಿಳಿದುಕೊಂಡಿಲ್ಲ. ದೂರಿಗೆ ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ನನ್ನ ಮರು ಹೇಳಿಕೆಯನ್ನು 5 ನೇ ತಾರೀಖು ಪಡೆದುಕೊಂಡರು. ಮಹಜರ್ ಗೆ ಪೊಲೀಸರು 5 ನೇ ತಾರೀಖು ಬಂದಿದ್ದರು. ಮಹಜರ್ ಬರೆಯುವಾಗ ನನ್ನ ಮಗ ಮತ್ತು ಬಾಮೈದಾ ರಂಗನಾಥ ಮಾತ್ರ ಇದ್ದರು. ಮಹಜರ್ ಗೆ ಸಹಿಯನ್ನು ನನ್ನ ಮಗ ಮತ್ತು ಬಾಮೈದಾ ರಂಗನಾಥ ಮಾತ್ರ ಮಾಡಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಅಲ್ಲಿ ಮಹಜರ್ ಬರೆದಿಲ್ಲ, ಠಾಣೆಯಲ್ಲಿ ಕುಳಿತು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಮೂ ಮಾ - 1 ಕಾಡು ದೊಣ್ಣೆಯಂತಹ ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಹೌದು. ಮೂ ಮಾ - 1 ಮೂರು ವರೆ ಅಡಿ ಇದೆ ಎಂದರೆ ಸರಿ. ಈ ದೊಣ್ಣೆಯನ್ನು ಕೃತ್ಯಕ್ಕೆ ಆರೊಪಿತರು ಬಳಸಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ನಾನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ಮೇಲೆ ಹಳೆ ದ್ವೇಷದಿಂದ ಸುಳ್ಳು ಕೇಸು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.